
# ಕರ್ನಾಟಕದಲ್ಲಿ...



ಕರ್ನಾಟಕದ ಮಟ್ಟಿಗೆ ಈ ವರ್ಷದ ಅತ್ಯಂತ ಆಘಾತಕರ ಸುದ್ದಿಯೆಂದರೆ ಹೆಸರಾಂತ ಸಂಶೋಧಕ ಡಾ.ಎಂ.ಎಂ.ಕಲ್ಬುರ್ಗಿಯವರ ಹತ್ಯೆ. ಇಬ್ಬರು ಅಪರಿಚಿತರು ಅವರ ಮನೆಗೇ ನುಗ್ಗಿ ಹಾಡುಹಗಲಲ್ಲೇ ಗುಂಡಿಕ್ಕಿ ಕೊಂದು ಕಣ್ಮರೆಯಾಗಿರುವುದು ಇಡೀ ರಾಜ್ಯಕ್ಕೆ ಆಘಾತ ಉಂಟು ಮಾಡಿದ ಘಟನೆ. ವರ್ಷದ ಕೊನೆಯಾದರೂ ಕೊಲೆಗಡುಕರ ಪತ್ತೆ ಆಗದೆ ಇರುವುದು ರಾಜ್ಯದ ಸಾಂಸ್ಕೃತಿಕ, ಸಾಹಿತ್ಯಕ ವಲಯದಲ್ಲಿ ಆತಂಕ ಹುಟ್ಟುಹಾಕಿದೆ. ಈ 'ಅಸಹಿಷ್ಣುತೆ'ಯನ್ನು ಪ್ರತಿಭಟಿಸಿ ಹಲವು ಲೇಖಕರು ಪ್ರಶಸ್ತಿಗಳನ್ನು ವಾಪಸ್ ಮಾಡಿದರು. ಇದನ್ನು ಟೀಕಿಸಿ ಇನ್ನು ಹಲವರು ರೇಗಿದರು. ಒಟ್ಟಾರೆ ರಾಜ್ಯದಲ್ಲೂ ಅಸಹಿಷ್ಣುತೆಯ ಪರ-ವಿರೋಧಿ, ವಾದ-ವಿವಾದಗಳು ಜೋರಾಗಿದ್ದವು.

ಭ್ರಷ್ಟಾಚಾರವನ್ನು ಮಟ್ಟ ಹಾಕಲು ಹುಟ್ಟು ಹಾಕಲಾಗಿದ್ದ ಕರ್ನಾಟಕದ ಲೋಕಾಯುಕ್ತ ಸಂಸ್ಥೆ ವರ್ಷದ ಕೊನೆಗೆ ತ್ರಿಶಂಕು ಸ್ಥಿತಿಗೆ ತಲುಪಿರುವುದು ಈ ವರ್ಷದ ಅತ್ಯಂತ ವಿಷಾದದ ಸಂಗತಿ. 'ನ್ಯಾ.ಭಾಸ್ಕರ ರಾವ್ ಸ್ವತಃ ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಟ್ಟಿದ್ದಾರೆ' ಎನ್ನುವುದನ್ನು ಮಾಧ್ಯಮಗಳು ಖಚಿತವಾಗಿ ಬಯಲಿಗೆಳೆದರೂ, ಕಾನೂನಿನ ದುರ್ಬಲ ಅಂಶಗಳನ್ನು ಮುಂದಿಟ್ಟು ಲೋಕಾಯುಕ್ತರು ಅಧಿಕಾರದಲ್ಲಿ ಮುಂದುವರಿದರು. ಕೊನೆಗೂ ಒತ್ತಡಕ್ಕೆ ಮಣಿದು ವರ್ಷದ ಕೊನೆಗೆ ರಾಜೀನಾಮೆ ಕೊಟ್ಟರು. ಈ ಮಧ್ಯೆ ಉಪಲೋಕಾಯುಕ್ತರನ್ನು ಪದಚ್ಯುತಿಗೊಳಿಸಲು ಆಳುವ ಕಾಂಗ್ರೆಸ್ ಪಕ್ಷವೇ ಯತ್ನಿಸಿ, ಮುಖಭಂಗಕ್ಕೆ ಒಳಗಾಗಿದೆ. ವರ್ಷದ ಕೊನೆಗೆ ಲೋಕಾಯುಕ್ತ ಸಂಸ್ಥೆ ಪೂರ್ಣ ನಿಷ್ಕ್ರಿಯವಾಗಿರುವುದು ಮಾತ್ರ ದುರಂತವೇ ಸರಿ.

ರೈತರ ಆತ್ಮಹತ್ಯೆಗಳು ನಿರಂತರವಾಗಿ ಮುಂದುವರಿದಿರುವುದು ರಾಜ್ಯದ ದೊಡ್ಡ ದುರದೃಷ್ಟ. ವರ್ಷದ ಮೊದಲ ಎಂಟು ತಿಂಗಳಲ್ಲೇ ಒಟ್ಟು 400 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಸರ್ಕಾರವೇ ಅಧಿಕೃತವಾಗಿ ಪ್ರಕಟಿಸಿತ್ತು. ಇದು ಹಿಂದಿನ ವರ್ಷಕ್ಕೆ ಹೋಲಿಸಿದರೆ 7 ಪಟ್ಟು ಹೆಚ್ಚು! ಆತ್ಮಹತ್ಯೆಗೆ ಶರಣಾದ ರೈತರ ಒಟ್ಟು ಸಂಖ್ಯೆ ವರ್ಷದ ಕೊನೆಗೆ 700 ದಾಟಿದೆ. ಮುಖ್ಯವಾಗಿ ಬರಗಾಲ, ಸಾಲದ ಮರುಪಾವತಿ ಸಮಸ್ಯೆ ಆತ್ಮಹತ್ಯೆಗೆ ಪ್ರಮುಖ ಕಾರಣಗಳು.



ಬೆಂಗಳೂರಿನಲ್ಲಿ ಮತ್ತು ರಾಜ್ಯದ ಹಲವೆಡೆ ಮಹಿಳೆಯರ ಮೇಲಿನ ಅತ್ಯಾಚಾರಗಳು ಪದೇ ಪದೇ ವರದಿಯಾಗಿರುವುದು ಈ ವಿಷಯದಲ್ಲಿ ಈ ವರ್ಷವೂ ಪರಿಸ್ಥಿತಿ ಸುಧಾರಣೆಯಾಗಿಲ್ಲ ಎನ್ನುವುದನ್ನು ಸೂಚಿಸಿದೆ. ಆದಕ್ಕಿಂತ ಮುಖ್ಯವಾಗಿ 'ದೇಶದಲ್ಲೇ ಅತ್ಯಂತ ಹೆಚ್ಚು ಸಾಲ ಪಡೆದಿರುವ ಎರಡನೇ ರಾಜ್ಯ ಕರ್ನಾಟಕ' ಎನ್ನುವುದು ರಾಜ್ಯದ ಆರ್ಥಿಕ ಸಂಕಟದ ಮುನ್ಸೂಚನೆಯಾಗಿದೆ.

ಲಾಟರಿ ಮತ್ತು ಕ್ರಿಕೆಟ್ ಬೆಟ್ಟಿಂಗ್ ಹಗರಣ ರಾಜ್ಯವನ್ನು ಬೆಚ್ಚಿ ಬೀಳಿಸಿದ ಇನ್ನೆರಡು ಘಟನೆಗಳು. ಅಕ್ರಮ ಲಾಟರಿ ಆರೋಪಿ ಪಾರಿರಾಜನ್ ಜತೆಗೆ ಸಂಪರ್ಕ ಇಟ್ಟುಕೊಂಡ ಹಿರಿಯ ಪೊಲೀಸ್ ಅಧಿಕಾರಿ ಅಲೋಕ್ ಕುಮಾರ್ ಅಮಾನತುಗೊಂಡರು. ಕ್ರಿಕೆಟ್ ಬೆಟಿಂಗ್ ಹಗರಣದಲ್ಲಿ ಹುಬ್ಬಳ್ಳಿಯ ಡಿಸಿಪಿ ಹಣಮಂತರಾಯಪ್ಪ ಅಮಾನತುಗೊಂಡರೆ, ಮಾಜಿ ಎಸ್ಪಿ ರವೀಂದ್ರಪ್ರಸಾದ್ ತನಿಖೆ ಎದುರಿಸಿದರು. ಹಿರಿಯ ಐಎಎಸ್ ಅಧಿಕಾರಿ ಅಲೋಕ್ ಮೋಹನ್ ಮನೆಯಲ್ಲಿ ಕೋಟ್ಯಂತರ ರೂಪಾಯಿ ಹಣ ಪತ್ತೆಯಾಗಿದ್ದು, ಕ್ರಿಕೆಟ್ ಬೆಟಿಂಗ್‌ನ ಭಯಾನಕ ರೂಪ ಬಯಲಿಗೆ ಬಂದಿದೆ.

ಬೆಂಗಳೂರಿನಲ್ಲಿ ಐಸಿಸ್ ಉಗ್ರರ ಬೆಂಬಲಿಗ ಕೋಲ್ಕತ್ತಾದ ಮೆಹದಿ ಮತ್ತು ಬೋಡೋ ಉಗ್ರರ ಮುಖಂಡ ಶಿಬಗಿರಿ ಬಂಧನ ನಡೆಯಿತು. ನಾಗಾ ಉಗ್ರ ಅತೋಷೆ ಪೊಲೀಸರ ಬಲೆಗೆ ಬಿದ್ದ. ವರ್ಷದ ಕೊನೆಗೆ ಬಂದ ಸುದ್ದಿಯ ಪ್ರಕಾರ, ಭಾರತದಲ್ಲಿ ಅತ್ಯಧಿಕ ವಿದೇಶಿ ವಿದ್ಯಾರ್ಥಿಗಳನ್ನು ಸೆಳೆಯುತ್ತಿರುವ ನಗರವೂ ಬೆಂಗಳೂರೇ.

2015



ತಿರುವನಂತಪುರ ಗಳಲ್ಲಿ ಏರ್ಪಾಡಾಗಿದ್ದ ಗುಲಾಂ ಅಲಿಯವರ ಕಾರ್ಯಕ್ರಮವನ್ನು ಶಿವಸೇನೆಯ ಕಾರ್ಯಕರ್ತರ ಬೆದರಿಕೆಯಿಂದಾಗಿ ರದ್ದುಗೊಳಿಸಿದ್ದು, ಸಾಂಸ್ಕೃತಿಕ ರಂಗದಲ್ಲಿ ದಾಖಲಾದ ಬಹುದೊಡ್ಡ ಸುದ್ದಿ.

ಆದರೆ ವರ್ಷದ ಕೊನೆಗೆ ಉಭಯ ದೇಶಗಳ ನಡುವಣ ಸಂಬಂಧ ಸ್ವಲ್ಪ ಮಟ್ಟಿಗೆ ಸುಧಾರಣೆಯಾಗುವ ಲಕ್ಷಣಗಳೂ ಕಂಡುಬಂದಿವೆ. ಕ್ರಿಸ್ಮಸ್ ದಿನದಂದು ರಷ್ಯಾ– ಅಫ್ಘಾನಿಸ್ತಾನ ಪ್ರವಾಸದಿಂದ ನೇರವಾಗಿ ಪಾಕಿಸ್ತಾನದ ಕಾಬೂಲ್‌ಗೆ ತೆರಳಲು ಪ್ರಧಾನಿ ನರೇಂದ್ರ ಮೋದಿಯವರು ಹಠಾತ್ ನಿರ್ಧಾರ ಕೈಗೊಂಡದ್ದು ನಾಟಕೀಯವಾದರೂ ಅತ್ಯಂತ ಮಹತ್ವದ ಘಟನೆ. ಅದೇ ದಿನ ಪಾಕ್ ಪ್ರಧಾನಿ ನವಾಝ್ ಷರೀಫ್ ಅವರ ಹುಟ್ಟುಹಬ್ಬವಿದ್ದು, ಮೋದಿಯವರು ಷರೀಫರಿಗೆ ಶುಭಾಶಯ ಹೇಳುವ ಮೂಲಕ ಉಭಯದೇಶಗಳ ಸಂಬಂಧಕ್ಕೆ ಹೊಸ ಆಯಾಮ ದೊರೆತಂತಾಗಿದೆ.

ಇದಕ್ಕೂ ಮುನ್ನ ಉಭಯದೇಶಗಳ ನಡುವೆ ಅಧಿಕಾರಿಗಳ ಮಟ್ಟದ ಮಾತುಕತೆ ಮುಂದುವರಿಸಲು ನಿರ್ಧರಿಸಲಾಗಿತ್ತು. ನಮ್ಮ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರು ಪಾಕಿಸ್ತಾನಕ್ಕೆ ಭೇಟಿಕೊಟ್ಟು ಅಲ್ಲಿನ ಪ್ರಧಾನಿ ನವಾಜ್ ಷರೀಫ್ ಜತೆಗೆ ಸಮಾಧಾನದಿಂದ ಮಾತುಕತೆ ನಡೆಸಿ ಮರಳಿದ್ದರು.

### ನೇಪಾಳದ ಭೂಕಂಪ

ವರ್ಷದ ಬಹುದೊಡ್ಡ ಸುದ್ದಿಯೆಂದರೆ ಏಪ್ರಿಲ್ 25ರಂದು ನೆರೆಯ ದೇಶ ನೇಪಾಳದಲ್ಲಿ ಆದ ಭಾರೀ ಭೂಕಂಪ. ನೇಪಾಳದ ರಾಜಧಾನಿ ಕಾಠ್ಮಂಡು ಈ ಭೂಕಂಪನದ ಕೇಂದ್ರಬಿಂದುವಾದರೂ, ಅದರ ಪರಿಣಾಮ ಭಾರತ, ಚೀನಾ ಮತ್ತು ಬಾಂಗ್ಲಾದ ಭೂಭಾಗಗಳಲ್ಲೂ ಕಾಣಿಸಿಕೊಂಡಿತು.




ಸೈನಾ ನೆಹ್ವಾಲ್
ಬ್ಯಾಡ್ಮಿಂಟನ್‌ನಲ್ಲಿ ಭಾರತಕ್ಕೆ ಕೀರ್ತಿ ತಂದ ಬೆಡಗಿ. ಈ ವರ್ಷ ಈಕೆ 'ವಿಶ್ವದ ನಂಬರ್ ಒನ್' ಬ್ಯಾಡ್ಮಿಂಟನ್ ಆಟಗಾರ್ತಿಯಾಗಿ ಭಾರತದ ಹೆಮ್ಮೆ ಎನ್ನಿಸಿಕೊಂಡರು.

ರಿಕ್ಟರ್ ಮಾಪಕದಲ್ಲಿ 7.8ರಿಂದ 8.1 ಸೂಚ್ಯಂಕ ತೋರಿದ ಈ ಭೀಕರ ಭೂಕಂಪ ಒಟ್ಟು 8964 ಜನರನ್ನು ಬಲಿ ತೆಗೆದುಕೊಂಡಿತು. ಅದರಲ್ಲಿ ನೇಪಾಳೀಯರ ಸಂಖ್ಯೆಯೇ 8857. ಕಾಠ್ಮಂಡುವಿನ ಹತ್ತಾರು ಪಾರಂಪರಿಕ ಕಟ್ಟಡಗಳು ಕುಸಿದುಬಿದ್ದವು. ಕೆಲವು ಹಳ್ಳಿಗಳನ್ನು ಭೂಮಿ ನುಂಗಿಹಾಕಿತು. 21952 ಜನ ಗಾಯಗೊಂಡರು. ಇದು ಅಧಿಕೃತ ಸಂಖ್ಯೆಯಾಗಿದ್ದರೂ, ಇನ್ನೂ ನೂರಾರು ಜನ ಕಣ್ಮರೆಯಾಗಿದ್ದಾರೆ ಎಂದು ಅನಧಿಕೃತ ವರದಿಗಳು ಸೂಚಿಸಿದವು. ಈ ಭೂಕಂಪನ ಭೂಮಿಯ ಆಳದಲ್ಲಿ 8.2 ಕಿ.ಮೀ ವರೆಗೆ ಹೋಗಿತ್ತು ಎಂದರೆ ಆಘಾತದ ಲೆಕ್ಕ ಹಾಕಿ!

ಭಾರತದಿಂದ ಪ್ರತಿವರ್ಷ ದೊಡ್ಡ ಸಂಖ್ಯೆಯಲ್ಲಿ ಪ್ರವಾಸಿಗರು ಮತ್ತು ಯಾತ್ರಾರ್ಥಿಗಳು ನೇಪಾಳಕ್ಕೆ ಹೋಗುತ್ತಾರೆ. ಈ ಸಲ ನೂರಾರು ಭಾರತೀಯರೂ ಅಲ್ಲಿ ಸಂಕಷ್ಟದಲ್ಲಿ ಸಿಲುಕಿಕೊಂಡರು. ಈ ಭೂಕಂಪದ ಪರಿಣಾಮ ಎಷ್ಟು ಭೀಕರವಾಗಿತ್ತೆಂದರೆ ಮರುದಿನದಿಂದ ಮತ್ತೆ ಸುಮಾರು 417 ಸಲ ಭೂಮಿ ಕಂಪಿಸಿತು. ಇದರ ಪರಿಣಾಮವಾಗಿಯೇ ಮೇ 12ರಂದು ಮತ್ತೊಮ್ಮೆ ನೇಪಾಳ– ಚೀನಾದ ಗಡಿ ಭಾಗದಲ್ಲಿ ಭೂಕಂಪನವಾಯಿತು. ಆಗ 200 ಜನ ಸಾವನ್ನಪ್ಪಿ, 2500ಕ್ಕೂ ಹೆಚ್ಚು ಜನ ಗಾಯಗೊಂಡರು. ಈ ಮಹಾದುರಂತದಿಂದ ಒಟ್ಟು ಸುಮಾರು 500 ಕೋಟಿ ಡಾಲರ್‌ಗಳಷ್ಟು ನಷ್ಟ ಸಂಭವಿಸಿತು ಎಂದು ಅಂದಾಜಿಸಲಾಗಿದೆ. ವರ್ಷದ ಕೊನೆಯಾದರೂ ಭೂಕಂಪನದ ಪರಿಣಾಮದಿಂದ ಇನ್ನೂ ನೇಪಾಳ ಚೇತರಿಸಿಕೊಂಡಿಲ್ಲ.

### ಮ್ಯಾಗಿ, ಮಾರ್ಕ್ ಮತ್ತು ಪಟೇಲ್!

ವರ್ಷದ ಮಧ್ಯೆ ದೊಡ್ಡ ಸುದ್ದಿ ಮಾಡಿದ್ದು ಮ್ಯಾಗಿ ನೂಡಲ್ಸ್, ಮಾರ್ಕ್ ಜೂಕರ್‌ಬರ್ಗ್ ಮತ್ತು ಹಾರ್ದಿಕ್ ಪಟೇಲ್. ಲಕ್ಷಾಂತರ ಭಾರತೀಯರ ಮನೆಮನೆಗಳಲ್ಲಿ ದಿನದ ಆಹಾರವಾಗಿದ್ ಮ್ಯಾಗಿ ಕಂಪೆನಿಯ ನೂಡಲ್ಸ್‌ನಲ್ಲಿ ಸತುವಿನ ಅಂಶ ಇರಬೇಕಾದದ್ದಕ್ಕಿಂತ ಹೆಚ್ಚಿದ್ದು, ಇದರಿಂದ ಆರೋಗ್ಯಕ್ಕೆ ತೊಂದರೆ ಇದೆ ಎಂದು ಪ್ರಯೋಗಾಲಯವೊಂದು ವರದಿ ಮಾಡಿದ್ದು ಆಹಾರ ಕ್ಷೇತ್ರದಲ್ಲಿ ದೊಡ್ಡ ಕಂಪನವುಂಟು ಮಾಡಿತು.





ನೆಸ್ಲೆ ಕಂಪೆನಿಯ ಸಿದ್ಧ ಆಹಾರ ಉತ್ಪನ್ನಗಳ ಪೈಕಿ ಮ್ಯಾಗಿ ಅತ್ಯಂತ




### 'ಫಾರಿನ್‌ಪ್ರಿಯ' ಪ್ರಧಾನಿ!

ಪ್ರಧಾನಿ ನರೇಂದ್ರ ಮೋದಿ ಅವರು ಸತತವಾಗಿ ವಿದೇಶ ಪ್ರವಾಸಗಳನ್ನು ಮಾಡುವ ಮೂಲಕ ಹೊಗಳಿಕೆ ಮತ್ತು ತೆಗಳಿಕೆಗೆ ಏಕಪ್ರಕಾರವಾಗಿ ಪಾತ್ರರಾಗಿರುವುದು ವರ್ಷದ ವಿಶೇಷ. ಈ ವರ್ಷ ಮೋದಿಯವರು 33 ವಿದೇಶ ಪ್ರವಾಸಗಳನ್ನು ಕೈಗೊಂಡು ದಾಖಲೆ ನಿರ್ಮಿಸಿದ್ದಾರೆ. ಅಮೆರಿಕ, ಯೂರೋಪ್ ಮತ್ತು ಏಷ್ಯಾದ ಬಹುತೇಕ ದೇಶಗಳನ್ನು ಅವರು ಸಂದರ್ಶಿಸಿದ್ದಾರೆ.

ಆಸ್ಟ್ರೇಲಿಯ, ಬಾಂಗ್ಲಾದೇಶ, ಭೂತಾನ್, ಬ್ರೆಝಿಲ್, ಕೆನಡಾ, ಚೀನಾ, ಫಿಜಿ, ಜರ್ಮನಿ, ಐರ್ಲಂಡ್, ಜಪಾನ್, ಕಜಕಿಸ್ತಾನ, ಕಿರ್ಗಿಸ್ತಾನ, ಮಲೇಷ್ಯಾ, ಮಾರಿಷಸ್, ಮಂಗೋಲಿಯ, ಮ್ಯಾನ್ಮಾರ್, ರಶ್ಯಾ, ಸೀಶೆಲ್ಸ್, ಶ್ರೀಲಂಕಾ, ದಕ್ಷಿಣ ಕೊರಿಯಾ, ತಾಜಕಿಸ್ತಾನ, ಟರ್ಕಿ, ತುರ್ಕ್‌ಮೆನಿಸ್ತಾನ, ಯುಎಇ, ಯುನೈಟೆಡ್ ಕಿಂಗ್‌ಡಮ್, ಉಜ್ಬೆಕಿಸ್ತಾನ, ಅಫಘಾನಿಸ್ತಾನ– ಹೀಗೆ ಮೋದಿಯವರ ವಿದೇಶ ಪ್ರವಾಸದ ಪಟ್ಟಿ ಬೆಳೆಯುತ್ತದೆ. ಫ್ರಾನ್ಸ್, ನೇಪಾಳ, ಸಿಂಗಾಪುರ ಮತ್ತು ಅಮೆರಿಕಗಳಿಗೆ ಈ ವರ್ಷ ಮೋದಿಯವರು ತಮ್ಮ ಎರಡನೇ ಭೇಟಿ ನೀಡಿದರು. ವರ್ಷದ ಕೊನೆಗೆ ಹಠಾತ್ತಾಗಿ, ಅಫಘಾನಿಸ್ತಾನದಿಂದಲೇ ಹೊರಟು, ಪಾಕಿಸ್ತಾನಕ್ಕೆ ಭೇಟಿ ನೀಡಿದ್ದೂ ಒಂದು ದಾಖಲೆಯೇ.

ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

